# ಕೆಂಪು ಜೀರುಂಡೆಗಳ ಮಿಲನಕೂಟ



ಹೊಲದ ಬದುವಿನಲ್ಲಿ ಫೋಟೊಗ್ರಫಿಗೆಂದು ಕೀಟಗಳ ಹುಡುಕಾಟದಲ್ಲಿದ್ದೆ. ಗಿಡವೊಂದರ ಎಲೆ ಮೇಲೆ ಕೆಂಬಣ್ಣದ ಕೀಟಗಳೆರಡು ಕಂಡುಬಂದವು. ಸಮೀಪ ಹೋಗಿ ದಿಟ್ಟಿಸಿದೆ. ಅವು ಪ್ರಣಯದಲ್ಲಿ ತೊಡಗಿದ್ದು ಕಂಡುಬಂತು. ತಕ್ಷಣ ಆ ದೃಶ್ಯಗಳನ್ನು ಕ್ಯಾಮೆರಾದಲ್ಲಿ ಕ್ಲಿಕ್ಕಿಸಲು ಶುರುಮಾಡಿದೆ.

ಈ ಕೀಟಗಳು ತಮ್ಮ ದೇಹದಿಂದ ಫ್ಯಾರಾಮೋನ್ ರಾಸಾಯನಿಕ ದ್ರವವನ್ನು ಹೊರಸೂಸಿ ಗಂಡು–ಹೆಣ್ಣು ಒಂದಕ್ಕೊಂದು ಆಕರ್ಷಿತವಾಗುತ್ತವೆ. ಪ್ರೌಢ ಗಂಡು ದುಂಬಿಯು ಗಿಡದ ರೆಂಬೆಯಲ್ಲಿ ಹೆಣ್ಣು ದುಂಬಿಯನ್ನು ನೋಡಿದಾಗ ತನ್ನ ರೆಕ್ಕೆಗಳನ್ನು ಮೇಲೆತ್ತಿ ಹಿಂಭಾಗವನ್ನು ಅದರ ಮುಖದತ್ತ ತಿರುಗಿಸಿ ಸುಗಂಧ ಸೂಸಲಾರಂಭಿಸಿತು. ಸುವಾಸನೆಗೆ ಆಕರ್ಷಿತಗೊಂಡ ಹೆಣ್ಣು, ಗಂಡಿಗೆ ಮುತ್ತಿಕ್ಕಿ ಸಹಮತಿಸಿತು.

ಹೆಣ್ಣು ದೂರ ಸರಿದು ಟೊಂಗೆಯತ್ತ ಹೋದರೆ, ಗಂಡು ಹಿಂಬಾಲಿಸಿತು. ಒಮ್ಮೆ ಪ್ರಿಯೆ ಸಿಕ್ಕಿದಳೆಂದರೆ ಮತ್ತೆ ಬಿಡಿಸಿಕೊಳ್ಳದಂತೆ ಬಿಗಿಯಾಗಿ ಆಲಂಗಿಸಿ, ಪ್ರಣಯಚೇಷ್ಟೆಯಲ್ಲಿ ತೊಡಗಿತು. ಗಂಡಿನ ಈ ಪ್ರೇಮದಾಟಕ್ಕೆ ನಾಚಿದ ಹೆಣ್ಣುದುಂಬಿ, ಎಲೆಯ ಕೆಳಭಾಗಕ್ಕೆ ಹೋಗಿ ಕುಳಿತಾಗ, ಗಂಡು ರೆಕ್ಕೆಯಿಂದ ಮೆಲುದನಿ ಹೊರಡಿಸಿ ಪ್ರೀತಿಯಿಂದ ಕರೆಯಿತು.

ಸಸ್ಯಗಳ ಎಲೆ ಇಲ್ಲವೇ ಕಾಂಡವೇ ಇವುಗಳ ಮಧುಮಂಚ. ಪ್ರಣಯದ ಪ್ರಥಮದಲ್ಲಿ, ಹೆಣ್ಣು ತನ್ನ ಹಿಂಭಾಗದ ರೆಕ್ಕೆಗಳನ್ನು ಅಗಲಿಸಿ ಗಂಡಿಗೆ ಮಿಲನಕ್ಕೆ ಆಹ್ವಾನ ನೀಡಿತು. ಗಂಡು ತನ್ನ ರೆಕ್ಕೆಗಳನ್ನು ಬಡಿದು ನಾದ ಹೊಮ್ಮಿಸಿ ಸಾವಧಾನದಿಂದ ಹೆಣ್ಣಿನ ಬೆನ್ನೇರಿ ಮುಂಗಾಲುಗಳಿಂದ ರೆಕ್ಕೆಗಳನ್ನು ಬಿಗಿಯಾಗಿ ಹಿಡಿದಪ್ಪಿ ಕೂಟಕ್ಕೆ ನಾಂದಿ ಹಾಡಿತು.

ಸಮಯ ಜಾರತೊಡಗಿತು. ಎಷ್ಟೋ ಹೊತ್ತಿನವರೆಗೂ ಇದೇ ಭಂಗಿಯಲ್ಲಿ ಜೀರುಂಡೆಗಳು ನಿಶ್ಚಲಗೊಂಡಿದ್ದವು. ಗಾಳಿ ಬೀಸಿ ಎಲೆ ಅದುರಿದಾಗ, ಮಿಲನ ಬಂಧನದಲ್ಲಿದ್ದ ಅವು ಜೊತೆಯಾಗಿಯೇ ಮತ್ತೊಂದು ಜಾಗದಲ್ಲಿ ಸ್ಥಿತವಾಗಿ ಪ್ರಣಯ ಮುಂದುವರೆಸಿದವು. ಇವುಗಳ ಮಿಲನಕೂಟ ಒಂದು ಗಂಟೆಯಿಂದ ಒಂದು ದಿನದವರೆಗೂ ಮುಂದುವರೆಯಬಹುದಂತೆ.

**ಈ ಜೋಡಿ ಜೀರುಂಡೆಗಳು ಒಂದಕ್ಕೊಂದು ಒಲವಿನ ಆಹ್ವಾನವೀಯುವ, ಒಲಿಯುವ, ಮಿಲನದಲ್ಲಿ ತೊಡಗುವ ಪರಿಯೇ ಸ್ವಾರಸ್ಯಕರ.**

■ ಶಶಿಧರಸ್ವಾಮಿ ಆರ್. ಹಿರೇಮಠ

ಈ ಕೆಂಪು ಕುಂಬಳಕಾಯಿ ಜೀರುಂಡೆಗಳನ್ನು 'ಕೆಂಪು ಕಲ್ಲಂಗಡಿ ದುಂಬಿ' ಅಥವಾ 'ಕೆಂಪು ಕೂಷ್ಮಂಡ ದುಂಬಿ' ಎಂತಲೂ ಕರೆಯುತ್ತಾರೆ. ಇಂಗ್ಲಿಷ್‌ನಲ್ಲಿ 'ರೆಡ್ ಪಂಪ್ಕಿನ್ ಬೀಟಲ್' (Red Pumpkin Beetle) ಎಂಬ ಹೆಸರಿದೆ. ಔಲಾಕೊಫೊರಾ ಫೊವಿಕೊಲಿಸ್ (Aulacophora foveicollis) ಎಂಬುದು ಇದರ ವೈಜ್ಞಾನಿಕ ಹೆಸರು.

ಇವು 5 ರಿಂದ 8 ಮಿ.ಮೀ. ಗಾತ್ರದಲ್ಲಿ ಬೆಳೆಯುತ್ತವೆ. ಹೊಳೆಯುವ ಕೆಂಪು ಅಥವಾ ಅಚ್ಚ ಕಿತ್ತಳೆ ಬಣ್ಣದ ದೇಹ, ಕಂದು ಕುಡಿಮೀಸೆ, ಕಪ್ಪಾದ ಸಂಯುಕ್ತಾಕ್ಷಗಳಿಂದ ಕೂಡಿರುತ್ತವೆ. ಪ್ರೌಢಾವಸ್ಥೆ ತಲುಪಿದ ಜೀರುಂಡೆಗಳು ಸಂಗಾತಿಯನ್ನು ಹುಡುಕಿ ಮಿಲನಕೂಟ ನಡೆಸುತ್ತ ಬೇಸಿಗೆ ಮತ್ತು ಮಳೆಗಾಲದ ಅವಧಿಯಲ್ಲಿ ವಂಶಾಭಿವೃದ್ಧಿ ಮಾಡುತ್ತವೆ. ಇವು ಕುಂಬಳ ಅಥವಾ ಕಲ್ಲಂಗಡಿ ಸಸಿಗಳ ಎಲೆ, ಕಾಂಡ, ಮೊಗ್ಗು, ಹೂವುಗಳನ್ನು ತಿಂದು ಆ ಸಸ್ಯಗಳನ್ನು ವಿರೂಪಗೊಳಿಸಿ ಬೆಳವಣಿಗೆ ಕುಂಠಿತಗೊಳಿಸುವುದರಿಂದ ರೈತ ಉಪಪ್ರವಿ ಕೀಟಗಳು ಎನಿಸಿಕೊಂಡಿವೆ.



ಚಳಿಗಾಲ ಹಾಗೂ ಬೇಸಿಗೆ ಕಾಲದಲ್ಲಿ ಈ ಜೀರುಂಡೆಗಳು ಬೆಚ್ಚಗಿನ ಜಾಗ ಹುಡುಕಿಗೊಂಡು ಕುಂಭಕರ್ಣನಂತೆ ನಿದ್ರೆಗೆ ಜಾರುತ್ತವೆ. ಮಳೆ ಬಿದ್ದ ಕೂಡಲೇ ಎಚ್ಚರಗೊಂಡು ಸಂಗಾತಿ ಹುಡುಕಾಟದಲ್ಲಿ ನಿರತವಾಗುತ್ತವೆ. ಗಂಡು ಕೆಂಪುಕುಂಬಳ ದುಂಬಿ ತನ್ನ ಉದರ ನಿರ್ವಹಣೆ ಕುರಿತು ಯೋಚಿಸುವ ಮೊದಲು ಪ್ರೇಮ ಜೀವನ, ಸಂಗಾತಿ, ಸಂತತಿಗಾಗಿ ಪರಿತಪಿಸಿ, ತನ್ನ ಪ್ರಿಯತಮೆಯ ಶೋಧದಲ್ಲಿ ತೊಡಗುತ್ತದೆ.

ಕೆಂಪು ಕುಂಬಳ ದುಂಬಿಗಳು ಪಾಲಿಗೆ ಬಂದದ್ದು ಪಂಚಾಮೃತವೆನ್ನದೆ, ತಮಗೆ ಇಷ್ಟವಾದವನ್ನೇ ಪಡೆಯಲು ಆತುರದಲ್ಲಿರುತ್ತವೆ. ಅವು ಕೊಡುಗೆಗಳನ್ನು ಅಪೇಕ್ಷಿಸುತ್ತವೆ. ಕೆಲವಕ್ಕೆ ಸ್ಪರ್ಶ ಸುಖ ಹಿತವಾದರೆ, ಇನ್ನು ಕೆಲವು ಶೌರ್ಯಕ್ಕೆ ಮರುಳಾಗುತ್ತವೆ. ಗಂಡು ದುಂಬಿ ತನ್ನನ್ನು ಒಪ್ಪಿದ ಕನ್ಯೆಯನ್ನು ಹಿಂಬಾಲಿಸಿ ಹೋಗಿ ತನ್ನವಳನ್ನಾಗಿ ಮಾಡಿಕೊಳ್ಳಲು ಕಸರತ್ತು ನಡೆಸುತ್ತದೆ.

ಈ ದುಂಬಿಗಳು ಒಂದಕ್ಕೊಂದು ಒಲಿಯುವುದು ದೀರ್ಘಕಾಲದ ಬಂಧನಕ್ಕಾಗಿ ಅಲ್ಲ. ತಮ್ಮ ಸುಖಕ್ಕೆ ಹಾಗೂ ಪೀಳಿಗೆಯ ಉಳಿವಿಗಾಗಿ ಮಾಡಿಕೊಂಡ ವ್ಯವಸ್ಥೆಯಷ್ಟೆ. ಹೀಗೆ ಒಲಿದು ಒಂದಾದ ಕೀಟಗಳು ಕೆಲವೇ ಗಂಟೆ ಅಥವಾ ನಿಮಿಷಗಳ ನಂತರ ವಿಚ್ಛೇದನ ಪಡೆದುಬಿಡುತ್ತವೆ.

ಹೆಣ್ಣು ದುಂಬಿ ಗುಂಪಾಗಿ ಎಂಟು ಮೊಟ್ಟೆಗಳನ್ನು ಮಣ್ಣಿನಲ್ಲಿ ಇಡುತ್ತದೆ. ಮೊಟ್ಟೆಗಳು ಅಂಡಾಕಾರದ ಕಿತ್ತಳೆ ಬಣ್ಣದವು. ಈ ಮೊಟ್ಟೆಗಳಿಂದ ಒಂದರಿಂದ ಎರಡು ವಾರಗಳಲ್ಲಿ ಮರಿಗಳು ಹೊರಬರುತ್ತವೆ. ಈ ಮರಿಗಳು ಮೊದಲಿಗೆ ಎಲೆಯ ಅವಶೇಷ, ಬೇರುಗಳು ಮತ್ತು ಮಣ್ಣಿನೊಂದಿಗೆ ಸಂಪರ್ಕದಲ್ಲಿರುವ ಆತಿಥೇಯ ಸಸ್ಯದ ಭಾಗಗಳನ್ನು ತಿನ್ನುತ್ತವೆ. ಅವು ಬೆಳೆದಂತೆ ನಾಲ್ಕು ಪೊರೆ ಕಳಚುವ ಮೂಲಕ ಮಣ್ಣಿನ ಮೇಲ್ಮೈಗಿಂತ ಸ್ವಲ್ಪ ಕೆಳಗಿರುವ ಮಣ್ಣಿನ ಕೋಣೆಗಳಲ್ಲಿ ಒಂದು ವಾರದಿಂದ ಎರಡೂವರೆ ವಾರಗಳ ಕಾಲ ಕೋಶಾವಸ್ಥೆಯಲ್ಲಿರುತ್ತವೆ. ನಂತರ ವಯಸ್ಕ ಜೀರುಂಡೆಗಳಾಗಿ ಹೊರಹೊಮ್ಮುತ್ತವೆ. ■